# ರಾಷ್ಟ್ರೀಯ ಕೆಡೆಟ್ ಕೋರ್ ಅಧಿನಿಯಮ, 1948

(1948ರ ಅಧಿನಿಯಮ ಸಂಖ್ಯೆ 31)

**[02-11-2004 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 30 ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 34 ರಿಂದ 36 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳು:**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಅನ್ವಯ
2. ಪರಿಭಾಷೆಗಳು
3. ರಾಷ್ಟ್ರೀಯ ಕೆಡೆಟ್ ಕೋರ್‌ನ ರಚನೆ
4. ಘಟಕಗಳ ರಚನೆ ಮತ್ತು ವಿಸರ್ಜನೆ
5. ಕೋರ್ ಅನ್ನು ವಿಭಾಗಗಳಾಗಿ ವಿಭಜಿಸುವುದು
6. ದಾಖಲಾತಿ
7. ಕೇಂದ್ರ ಸರ್ಕಾರವು ಇತರ ಘಟಕಗಳನ್ನು ಸ್ಥಾಪಿಸಬಹುದು
8. ಬಿಡುಗಡೆ
9. ಅಧಿಕಾರಿಗಳ ನೇಮಕ
10. ಈ ಅಧಿನಿಯಮಕ್ಕೆ ಒಳಪಡುವ ವ್ಯಕ್ತಿಗಳ ಕರ್ತವ್ಯಗಳು
11. ಈ ಅಧಿನಿಯಮದ ಮೇರೆಗಿನ ಅಪರಾಧಗಳಿಗಾಗಿ ಶಿಕ್ಷೆ
12. ಸಲಹಾ ಸಮಿತಿಗಳನ್ನು ನೇಮಿಸುವ ಅಧಿಕಾರ
13. ನಿಯಮ ರಚನಾಧಿಕಾರ

# ರಾಷ್ಟ್ರೀಯ ಕೆಡೆಟ್ ಕೋರ್ ಅಧಿನಿಯಮ, 1948

(1948ರ ಅಧಿನಿಯಮ ಸಂಖ್ಯೆ 31)

[16 ನೇ ಏಪ್ರಿಲ್, 1948]

ರಾಷ್ಟ್ರೀಯ ಕೆಡೆಟ್ ಕೋರ್ ರಚನೆಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ರಾಷ್ಟ್ರೀಯ ಕೆಡೆಟ್ ಕೋರ್ ರಚನೆಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಈ ಮೂಲಕ ಕೆಳಕಂಡಂತೆ ಅಧಿನಿಯಮಿತಿಗೊಳಿಸಲಾಗಿದೆ:–

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಅನ್ವಯ.**– (1) ಈ ಅಧಿನಿಯಮವನ್ನು ರಾಷ್ಟ್ರೀಯ ಕೆಡೆಟ್ ಕೋರ್ ಅಧಿನಿಯಮ, 1948 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ದಾಖಲಾದ ಅಥವಾ ನೇಮಕ ಮಾಡಲಾದ ಎಲ್ಲಾ ವ್ಯಕ್ತಿಗಳಿಗೂ, ಅವರು ಎಲ್ಲೇ ಇರಲಿ ಅನ್ವಯವಾಗತಕ್ಕದ್ದು.

**2. ಪರಿಭಾಷೆಗಳು:**– ಈ ಅಧಿನಿಯಮದಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,–

"ಕೋರ್" ಎಂದರೆ ಈ ಅಧಿನಿಯಮದ ಮೇರೆಗೆ ರಚಿತವಾದ ರಾಷ್ಟ್ರೀಯ ಕೆಡೆಟ್ ಕೋರ್;

"ದಾಖಲಾದವರು" ಎಂದರೆ ಈ ಅಧಿನಿಯಮದ ಮೇರೆಗೆ ಕೋರ್‌ಗೆ ದಾಖಲಾದವರು;

"ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

"ಶಾಲೆ" ಎಂಬುದರಲ್ಲಿ ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಈ ಸಂಬಂಧದಲ್ಲಿ ಮನ್ನಣೆ ಪಡೆದಿರುವಂಥ ಯಾವುದೇ ಸಂಸ್ಥೆಯು ಸೇರುತ್ತದೆ;

"ವಿಶ್ವವಿದ್ಯಾನಿಲಯ" ಎಂದರೆ ಭಾರತದಲ್ಲಿ ಕಾನೂನಿನ ಮೂಲಕ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾನಿಲಯ ಮತ್ತು ಇದರಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾದ ಕಾಲೇಜುಗಳು, ಇಂಟರ್ ಮೀಡಿಯಟ್ ಕಾಲೇಜುಗಳು ಮತ್ತು ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಈ ಸಂಬಂಧದಲ್ಲಿ ಮನ್ನಣೆ ಪಡೆದ ಮತ್ತು ಕಾಲೇಜಿನ ಸ್ಥಾನಮಾನ ಪಡೆದ ತಾಂತ್ರಿಕ ಶಿಕ್ಷಣ ಸಂಸ್ಥೆಗಳು.

**3. ರಾಷ್ಟ್ರೀಯ ಕೆಡೆಟ್ ಕೋರ್‌ನ ರಚನೆ.**– ರಾಷ್ಟ್ರೀಯ ಕೆಡೆಟ್ ಕೋರ್ ಎಂದು ಹೆಸರಿಸಬೇಕಾದ ಕೋರ್ ಅನ್ನು ಇದರಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಸ್ಥಾಪಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು ಅವಶ್ಯವಾದಾಗಲೆಲ್ಲಾ ಮತ್ತು ಅವಶ್ಯಕವಿರುವಲ್ಲೆಲ್ಲಾ ಕೋರ್‌ನ ಎಲ್ಲಾ ಘಟಕಗಳನ್ನು ಅಥವಾ ಯಾವುದೇ ಘಟಕವನ್ನು ಸ್ಥಾಪಿಸಬಹುದು.

**4. ಘಟಕಗಳ ರಚನೆ ಮತ್ತು ವಿಸರ್ಜನೆ.**– ಕೇಂದ್ರ ಸರ್ಕಾರವು, ಯಾವುದೇ ರಾಜ್ಯದಲ್ಲಿ ಕೋರ್‌ನ ಒಂದು ಅಥವಾ ಹೆಚ್ಚು ಘಟಕಗಳನ್ನು ರಚಿಸಬಹುದು. ಅದರ ಸದಸ್ಯರಾಗಿ ಕೋರ್‌ನ ಯಾವುದೇ ವಿಶ್ವವಿದ್ಯಾನಿಲಯದ ಅಥವಾ ಶಾಲೆಯ ವಿದ್ಯಾರ್ಥಿಗಳ ಪೈಕಿಯಿಂದ ಭರ್ತಿ ಮಾಡಿಕೊಳ್ಳತಕ್ಕದ್ದು ಮತ್ತು ಹಾಗೆ ರಚಿಸಿದ ಯಾವುದೇ ಘಟಕವನ್ನು ವಿಸರ್ಜಿಸಬಹುದು ಅಥವಾ ಪುನರ್‌ರಚಿಸಬಹುದು.

**5. ಕೋರ್‌ಅನ್ನು ವಿಭಾಗಗಳಾಗಿ ವಿಭಜಿಸುವುದು.**– ಕೋರ್‌ನಲ್ಲಿ ಮೂರು ವಿಭಾಗಗಳು ಇರತಕ್ಕದ್ದು, ಅವುಗಳೆಂದರೆ:–

(i) ಹಿರಿಯರ ವಿಭಾಗ, ಇದಕ್ಕೆ ಯಾವುದೇ ವಿಶ್ವವಿದ್ಯಾನಿಲಯದ ಪುರುಷ ವಿದ್ಯಾರ್ಥಿಗಳ ಪೈಕಿಯಿಂದ ಭರ್ತಿ ಮಾಡಿಕೊಳ್ಳತಕ್ಕದ್ದು;

(ii) ಕಿರಿಯರ ವಿಭಾಗ, ಇದಕ್ಕೆ ಯಾವುದೇ ಶಾಲೆಯ ಪುರುಷ ವಿದ್ಯಾರ್ಥಿಗಳ ಪೈಕಿಯಿಂದ ಭರ್ತಿ ಮಾಡಿಕೊಳ್ಳತಕ್ಕದ್ದು;

(iii) ಹುಡುಗಿಯರ ವಿಭಾಗ, ಇದಕ್ಕೆ ಯಾವುದೇ ವಿಶ್ವವಿದ್ಯಾನಿಲಯದ ಅಥವಾ ಶಾಲೆಯ ಮಹಿಳಾ ವಿದ್ಯಾರ್ಥಿನಿಯರ ಪೈಕಿಯಿಂದ ಭರ್ತಿ ಮಾಡಿಕೊಳ್ಳತಕ್ಕದ್ದು.

6. **ದಾಖಲಾತಿ.**- ಯಾವುದೇ ವಿಶ್ವವಿದ್ಯಾನಿಲಯದ ಯಾರೇ ಪುರುಷ ವಿದ್ಯಾರ್ಥಿಯು ಹಿರಿಯರ ವಿಭಾಗದಲ್ಲಿ ಕೆಡೆಟ್ ಆಗಿ ದಾಖಲಾಗಲು ಮತ್ತು ಯಾವುದೇ ಶಾಲೆಯ ಪುರುಷ ವಿದ್ಯಾರ್ಥಿಯು ನಿರ್ದಿಷ್ಟಪಡಿಸಲಾದ ವಯಸ್ಸಿನವನಾಗಿದ್ದರೆ ಅಥವಾ ಅದಕ್ಕೂ ಹೆಚ್ಚಿನ ವಯಸ್ಸಿನವನಾಗಿದ್ದರೆ ಕಿರಿಯರ ವಿಭಾಗದಲ್ಲಿ ಕೆಡೆಟ್ ಆಗಿ ದಾಖಲಾಗಲು ತನ್ನ ಇಚ್ಛೆಯನ್ನು ವ್ಯಕ್ತಪಡಿಸಬಹುದು.

(2) ಯಾವುದೇ ವಿಶ್ವವಿದ್ಯಾನಿಲಯ ಅಥವಾ ಶಾಲೆಯ ಮಹಿಳಾ ವಿದ್ಯಾರ್ಥಿಯು ಹುಡುಗಿಯರ ವಿಭಾಗದಲ್ಲಿ ಕೆಡೆಟ್ ಆಗಿ ದಾಖಲಾಗಲು ತನ್ನ ಇಚ್ಛೆಯನ್ನು ವ್ಯಕ್ತಪಡಿಸಬಹುದು:

ಪರಂತು, ಅವಳು ನಿಯಮಿಸಲಾದ ವಯಸ್ಸಿನವಳಾಗಿರಬೇಕು ಅಥವಾ ಅದಕ್ಕೂ ಹೆಚ್ಚಿನ ವಯಸ್ಸಿನವಳಾಗಿರಬೇಕು.

7. **ಕೇಂದ್ರ ಸರ್ಕಾರವು ಇತರ ಘಟಕಗಳನ್ನು ಸ್ಥಾಪಿಸಬಹುದು.**- ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಯಾವುದೇ ಸ್ಥಳದಲ್ಲಿ ಕೋರ್‌ನ ಯಾವುದೇ ಇತರ ಘಟಕಗಳನ್ನು ಸ್ಥಾಪಿಸಲು ಮತ್ತು ಅದಕ್ಕೆ ದಾಖಲಾಗಲು ಅರ್ಹತೆ ಹೊಂದಿರುವ ವ್ಯಕ್ತಿಗಳನ್ನು ಅಥವಾ ವ್ಯಕ್ತಿಗಳ ವರ್ಗಗಳನ್ನು ನಿಯಮಿಸಬಹುದು.

8. **ಬಿಡುಗಡೆ.**- ಈ ಅಧಿನಿಯಮದ ಮೇರೆಗೆ ದಾಖಲಾದ ಪ್ರತಿಯೊಬ್ಬ ವ್ಯಕ್ತಿಯು, ಅವನಾಗಲಿ ಅಥವಾ ಅವಳಾಗಲಿ ಯಾವ ಅವಧಿಗಾಗಿ ದಾಖಲಾಗಿರುವರೋ ಅಂಥ ಅವಧಿಯು ಮುಕ್ತಾಯಗೊಂಡ ನಂತರ ಅಥವಾ ಅವರು ಸೇರಿರುವ ವಿಶ್ವವಿದ್ಯಾನಿಲಯದ ಅಥವಾ ಶಾಲೆಯ ಹಾಜರಿ ಪಟ್ಟಿಯಲ್ಲಿ ಅವನ ಅಥವಾ ಅವಳ ಹೆಸರು ಇಲ್ಲದಿದ್ದರೆ ಅಂಥವರು ಬಿಡುಗಡೆ ಹೊಂದಲು ಹಕ್ಕುಳ್ಳವರಾಗಿರುತ್ತಾರೆ:

ಪರಂತು, ದಾಖಲಾದ ಯಾರೇ ವ್ಯಕ್ತಿಯನ್ನು ಅಂಥ ಪ್ರಾಧಿಕಾರವು, ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಯಾವುದೇ ಸಮಯದಲ್ಲಿ ಬಿಡುಗಡೆ ಮಾಡಬಹುದು.

9. **ಅಧಿಕಾರಿಗಳ ನೇಮಕ.**- ಕೇಂದ್ರ ಸರ್ಕಾರವು ಕೋರ್‌ನ ಯಾವುದೇ ಘಟಕದಲ್ಲಿ ಅಥವಾ ಘಟಕಕ್ಕಾಗಿ ಯಾವುದೇ ವಿಶ್ವವಿದ್ಯಾನಿಲಯದ ಅಥವಾ ಶಾಲೆಯ ಸಿಬ್ಬಂದಿಯ ಸದಸ್ಯರಿಂದಾಗಲಿ ಅಥವಾ ಅನ್ಯಥಾ ಅಧಿಕಾರಿಗಳ ನೇಮಕಕ್ಕಾಗಿ ಉಪಬಂಧ ಕಲ್ಪಿಸಬಹುದು ಮತ್ತು ಅಂಥ ಅಧಿಕಾರಿಗಳ ಕರ್ತವ್ಯಗಳನ್ನು, ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ನಿಯಮಿಸಬಹುದು.

10. **ಈ ಅಧಿನಿಯಮಕ್ಕೆ ಒಳಪಡುವ ವ್ಯಕ್ತಿಗಳ ಕರ್ತವ್ಯಗಳು.**- ಈ ಅಧಿನಿಯಮಕ್ಕೆ ಒಳಪಟ್ಟ ಯಾರೇ ವ್ಯಕ್ತಿಯು, ಕೋರ್‌ನ ಸದಸ್ಯನಾಗಿರುವ ಕಾರಣದಿಂದಾಗಿ ಸಕ್ರಿಯ ಮಿಲಿಟರಿ ಸೇವೆಗೆ ಬದ್ಧನಾಗಿರತಕ್ಕದ್ದಲ್ಲ, ಆದರೆ ಅದಕ್ಕೆ ಒಳಪಟ್ಟ ಯಾರೇ ಅಂಥ ವ್ಯಕ್ತಿಯು ನಿಯಮಿಸಬಹುದಾದಂಥ ಕರ್ತವ್ಯಗಳನ್ನು ನಿರ್ವಹಿಸಲು ಮತ್ತು ಅಂಥ ಬಾಧ್ಯತೆಗಳನ್ನು ಈಡೇರಿಸಲು ಬದ್ಧನಾಗಿರತಕ್ಕದ್ದು.

11. **ಈ ಅಧಿನಿಯಮದ ಮೇರೆಗಿನ ಅಪರಾಧಗಳಿಗಾಗಿ ಶಿಕ್ಷೆ.**- ಈ ಅಧಿನಿಯಮದ ಮೇರೆಗೆ ದಾಖಲಾದ ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುದೇ ನಿಯಮದ ಉಲ್ಲಂಘನೆಗಾಗಿ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು ಮತ್ತು ನಿಯಮಿಸಬಹುದಾದಂಥ ಪ್ರಾಧಿಕಾರವು, ನಿಯಮಿಸಬಹುದಾದಂಥ ರೀತಿಯಲ್ಲಿ ಅದನ್ನು ವಸೂಲು ಮಾಡಬಹುದು.

**12. ಸಲಹಾ ಸಮಿತಿಗಳನ್ನು ನೇಮಿಸುವ ಅಧಿಕಾರ.**– (1) ಕೇಂದ್ರ ಸರ್ಕಾರವು, ಕೋರ್‌ನ ರಚನೆ ಮತ್ತು ಅದರ ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯನೀತಿ ವಿಷಯಗಳ ಬಗ್ಗೆ ತನಗೆ ಸಲಹೆ ನೀಡುವ ಉದ್ದೇಶಕ್ಕಾಗಿ ಈ ಕೆಳಕಂಡ ವ್ಯಕ್ತಿಗಳನ್ನು ಒಳಗೊಂಡಿರುವ ಕೇಂದ್ರ ಸಲಹಾ ಸಮಿತಿಯನ್ನು ರಚಿಸಬಹುದು, ಎಂದರೆ:–

(ಎ) ರಕ್ಷಣಾ ಖಾತೆಯ ಮಂತ್ರಿ, ಇವರು ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು;

(ಬಿ) ಭಾರತ ಸರ್ಕಾರದ ಕಾರ್ಯದರ್ಶಿ, ರಕ್ಷಣಾ ಮಂತ್ರಾಲಯ, ಪದನಿಮಿತ್ತ;

(ಸಿ) ಭಾರತ ಸರ್ಕಾರದ ಕಾರ್ಯದರ್ಶಿ, ಶಿಕ್ಷಣ ಮಂತ್ರಾಲಯ, ಪದನಿಮಿತ್ತ;

(ಡಿ) ಹಣಕಾಸು ಸಲಹೆಗಾರ, ರಕ್ಷಣಾ ಮಂತ್ರಾಲಯ, ಪದನಿಮಿತ್ತ;

(ಇ) ಭೂಸೇನಾ ಸಿಬ್ಬಂದಿಯ ಮುಖ್ಯಸ್ಥ, ಪದನಿಮಿತ್ತ;

(ಎಫ್) ನೌಕಾದಳದ ಸಿಬ್ಬಂದಿಯ ಮುಖ್ಯಸ್ಥ, ಪದನಿಮಿತ್ತ;

(ಜಿ) ವಾಯುದಳದ ಸಿಬ್ಬಂದಿಯ ಮುಖ್ಯಸ್ಥ, ಪದನಿಮಿತ್ತ;

(ಹೆಚ್) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಐದು ಜನ ಅಧಿಕಾರೇತರ ಸದಸ್ಯರು; ಮತ್ತು

(ಐ) ಸಂಸತ್ತಿನ ಮೂವರು ಸದಸ್ಯರು, ಇವರಲ್ಲಿ ಲೋಕಸಭೆಯಿಂದ ಇಬ್ಬರು ಮತ್ತು ರಾಜ್ಯ ಸಭೆಯಿಂದ ಒಬ್ಬರು ಚುನಾಯಿತರಾಗತಕ್ಕದ್ದು.

(1ಎ)(1)ನೇ ಉಪಪ್ರಕರಣದ (ಐ) ಖಂಡದ ಮೇರೆಗೆ ಚುನಾಯಿತನಾದ ಒಬ್ಬ ಸದಸ್ಯನು ತಾನು ಚುನಾಯಿತನಾದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಅಥವಾ ತನ್ನನ್ನು ಚುನಾಯಿಸಿದ ಸದನದ ಸದಸ್ಯನಾಗಿರುವುದು ನಿಂತುಹೋಗುವವರೆಗೆ, ಇವೆರಡರಲ್ಲಿ ಯಾವುದು ಮುಂಚೆಯೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು.

(2) ಕೇಂದ್ರ ಸರ್ಕಾರವು, ತಾನು ಅಪೇಕ್ಷಣೀಯವೆಂದು ಪರಿಗಣಿಸಬಹುದಾದಂಥ ರಾಜ್ಯ ಸಲಹಾ ಸಮಿತಿಗಳನ್ನು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವಂತಹುದೇ ಉದ್ದೇಶಕ್ಕಾಗಿ ಸಹ ಕಾಲಕಾಲಕ್ಕೆ ನೇಮಿಸಬಹುದು ಮತ್ತು ಅವುಗಳ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿಯಮಿಸಬಹುದು.

**13. ನಿಯಮ ರಚನಾಧಿಕಾರ.**– (1) ಕೇಂದ್ರ ಸರ್ಕಾರವು ಈ ಅಧಿನಿಯಮದ ಉದ್ದೇಶವನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಇಂಥ ನಿಯಮಗಳು:–

(ಎ) ಈ ಅಧಿನಿಯಮದ ಮೇರೆಗೆ ವಿಶ್ವವಿದ್ಯಾನಿಲಯಗಳು ಅಥವಾ ಶಾಲೆಗಳು ಯಾವ ಷರತ್ತುಗಳಿಗೆ ಒಳಪಟ್ಟು ತಮ್ಮ ಘಟಕಗಳನ್ನು ಸ್ಥಾಪಿಸಿಕೊಳ್ಳಲು ಅವುಗಳಿಗೆ ಅನುಮತಿ ನೀಡತಕ್ಕದ್ದೋ ಅಂಥ ಷರತ್ತುಗಳನ್ನು ನಿಯಮಿಸಬಹುದು;

(ಬಿ) 7ನೇ ಪ್ರಕರಣದ ಮೇರೆಗೆ ದಾಖಲಾಗಲು ಅರ್ಹರಾಗಬಹುದಾದ ವ್ಯಕ್ತಿಗಳನ್ನು ಅಥವಾ ವ್ಯಕ್ತಿಗಳ ವರ್ಗವನ್ನು ನಿಯಮಿಸಬಹುದು;

(ಸಿ) ಈ ಅಧಿನಿಯಮದ ಮೇರೆಗೆ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗವನ್ನು ಯಾವ ರೀತಿಯಲ್ಲಿ ಮತ್ತು ಯಾವ ಅವಧಿಯವರೆಗೆ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ದಾಖಲ್ಮಾಡಿಕೊಳ್ಳಬಹುದೋ ಅಂಥ ರೀತಿ, ಅವಧಿ ಮತ್ತು ಷರತ್ತುಗಳನ್ನು ನಿಯಮಿಸಬಹುದು;

(ಡಿ) ಈ ಅಧಿನಿಯಮದ ಮೇರೆಗೆ ತಾವಾಗಿಯೇ ದಾಖಲಾಗಲು ಬಯಸುವ ವ್ಯಕ್ತಿಗಳ ವೈದ್ಯಕೀಯ ಪರೀಕ್ಷೆಗೆ ಉಪಬಂಧ ಕಲ್ಪಿಸಬಹುದು;

(ಇ) ಈ ಅಧಿನಿಯಮಕ್ಕೆ ಒಳಪಟ್ಟು ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗಕ್ಕೆ ಪ್ರಾರಂಭಿಕ ಮತ್ತು ನಿಯತಕಾಲಿಕ ಮಿಲಿಟರಿ ತರಬೇತಿಯನ್ನು ನಿಯಮಿಸಬಹುದು;

(ಎಫ್) ಕೋರ್‌ನ ಸದಸ್ಯರು ಮಿಲಿಟರಿ ತರಬೇತಿ ಪಡೆಯುತ್ತಿರುವಾಗ ಅವರು ಬದ್ಧರಾಗತಕ್ಕ ಮಿಲಿಟರಿ ಅಥವಾ ಇತರ ಬಾಧ್ಯತೆಗಳನ್ನು ನಿಯಮಿಸಬಹುದು ಮತ್ತು ಕೋರ್‌ನ ಸದಸ್ಯರು ಶಿಸ್ತನ್ನು ಕಾಪಾಡಿಕೊಂಡು ಬರುವ ಬಗ್ಗೆ ಸಾಮಾನ್ಯವಾಗಿ ಉಪಬಂಧ ಕಲ್ಪಿಸಬಹುದು;

(ಜಿ) ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಅಧಿಕಾರಿಗಳ ಕರ್ತವ್ಯಗಳನ್ನು, ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ನಿಯಮಿಸಬಹುದು;

(ಹೆಚ್) ಈ ಅಧಿನಿಯಮಕ್ಕೆ ಒಳಪಟ್ಟ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕ ಭತ್ಯೆ ಅಥವಾ ಇತರ ಸಂಭಾವನೆಯನ್ನು ನಿಯಮಿಸಬಹುದು;

(ಐ) ಈ ಅಧಿನಿಯಮಕ್ಕೆ ಒಳಪಟ್ಟ ಯಾರೇ ವ್ಯಕ್ತಿಯನ್ನು ತೆಗೆದುಹಾಕಲು ಅಥವಾ ಬಿಡುಗಡೆ ಮಾಡಲು ಉಪಬಂಧ ಕಲ್ಪಿಸಬಹುದು;

(ಜೆ) ಈ ಅಧಿನಿಯಮಕ್ಕೆ ಒಳಪಟ್ಟ ಯಾರೇ ವ್ಯಕ್ತಿಯು ಯಾವ್ಯಾವ ಅಪರಾಧಗಳಿಗಾಗಿ ವಿಚಾರಣೆಗೆ ಒಳಪಡಬಹುದೆಂಬುದನ್ನು ನಿಯಮಿಸಬಹುದು ಮತ್ತು ಅದರ ವಿಚಾರಣೆಗಾಗಿ ಉಪಬಂಧ ಕಲ್ಪಿಸಬಹುದು;

(ಕೆ) ಈ ಅಧಿನಿಯಮದ ಮೇರೆಗೆ ವಿಧಿಸಲಾಗುವ ಜುಲ್ಮಾನೆಗಳನ್ನು ಯಾವ ರೀತಿ ವಸೂಲು ಮಾಡಬೇಕೆಂಬುದನ್ನು ನಿಯಮಿಸಬಹುದು;

(ಎಲ್) ಕೇಂದ್ರ ಅಥವಾ ರಾಜ್ಯ ಸಲಹಾ ಸಮಿತಿಗಳ ಕರ್ತವ್ಯಗಳನ್ನು, ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ನಿಯಮಿಸಬಹುದು; ಮತ್ತು

(ಎಂ) ಈ ಅಧಿನಿಯಮದ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಿದ ಅಧಿವೇಶನದ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದರೆ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ವಿಷಯದ ಕಾನೂನು ಮಾನ್ಯತೆಗೆ ಬಾಧಕವಾಗದಂತೆ ಇರತಕ್ಕದ್ದು.

* * *